# ಅಡಿಗರ ಕಾವ್ಯದಲ್ಲಿ ಮಹಿಳೆ

ಅಣ್ಣಮ್ಮ

ಪ್ರಾಧ್ಯಾಪಕರು, ಡಾ.ಡಿ.ವಿ.ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

DOI: https://doi.org/10.5281/zenodo.14034854

## ABSTRACT:

ನವೋದಯದ ಜಾಡಿನಲ್ಲೇ ಮೊದಲ ಮೂರು ಸಂಕಲನ (ಭಾವತರಂಗ, ಕಟ್ಟುವೆವು ನಾವು, ನಡೆದು ಬಂದ ದಾರಿ) ಬರೆದ ಗೋಪಾಲಕೃಷ್ಣ ಅಡಿಗರು, ಈ ಮೂರು ಸಂಕಲನದಲ್ಲಿ ಮಹಿಳೆಯನ್ನು ಕುರಿತು ಅನೇಕ ಕವಿತೆಗಳನ್ನು ಬರೆಯುತ್ತಾರೆ. ರೊಮ್ಯಾಂಟಿಕ್ ಸಂಪ್ರದಾಯದಲ್ಲಿ ಕಂಡುಬರುವ ಅತಿಭಾವುಕತೆ, ಸೌಂದರ್ಯೋಪಾಸನೆ, ನಿಸ್ಸತ್ವವಾದ ಭಾಷೆ ತ್ಯಜಿಸಿ ವಾಸ್ತವಿಕ ಜೀವನಕ್ಕೆ ಸ್ಪಂದಿಸಿ ಕವಿತೆ ರಚಿಸುವ ಪ್ರಯೋಗಕ್ಕೆ ಕೈ ಹಚ್ಚಿದ್ದು ನಂತರ ಕಂಡು ಬರುತ್ತೆ.

1938ರಿಂದ 1942ರ ವರೆಗೆ ಅನೇಕ ಕವಿತೆಗಳನ್ನು ಬರೆದ ಅಡಿಗರು 'ಜೀವನಸಖಿ' 'ನಗು ನನ್ನ ನಲ್ಲೆ' 'ಮುಗುದೆ ಇವಳು' 'ನನ್ನವಳೀ ಹೆಣ್ಣು' 'ನನ್ನ ಮೋಹದ ಮೂರ್ತಿ' 'ಒಡೆದು ಬಿದ್ದ ಕೊಳಲು' 'ಹೆಣ್ಣು: 1' 'ಹೆಣ್ಣು: 2' 'ಒಲವು' 'ಎಂಥ ಕಣ್ಣು' 'ತರಳೆ' 'ನಿಜವ ನುಡಿ ತಂಗಿ' 'ಮಾನವ ಹೃದಯವು' 'ನನ್ನ ನಿನ್ನ ಲೋಕ' 'ಒಂದು ಕಾಗದ' 'ನನ್ನ ನಿನ್ನ ನಡುವೆ' 'ಏಕತೆ', 'ಪರಿತಾಪ'– ಇಂಥ ಕವಿತೆಗಳು ಪ್ರಾರಂಭದ ಹೆಣ್ಣನ್ನು ಕುರಿತ ಕವಿತೆಗಳು.

## KEYWORDS:

ರೊಮ್ಯಾಂಟಿಕ್, ಅತಿಭಾವುಕತೆ, ಸೌಂದರ್ಯೋಪಾಸನೆ, ಸಂಪ್ರದಾಯ, ಹೃದಯವಿದ್ರಾವಕ, ಇಂದ್ರಿಯಸುಖ.

ಕವಿಗಳಿಗೆ ತಮ್ಮ ಕಾವ್ಯ ವಸ್ತು ಹೆಣ್ಣನ್ನು ಕುರಿತು ಅದನ್ನು ಹೇಗೆ ಆಕರ್ಷಕವಾಗಿ, ವಯೋಸಹಜವಾಗಿ ಬರೆಯಬೇಕು ಎನ್ನುವ ತುಮುಲ ಹೆಚ್ಚಾಗಿರುತ್ತದೆ. ಇದಕ್ಕೆ ಅಡಿಗರೂ ಹೊರತಾಗಿರಲಿಲ್ಲ. ನವೋದಯದ ಶೈಲಿಯಲ್ಲಿ 'ಜೀವನಸಖಿ' ಎನ್ನುವ ಕವಿತೆ ಬರೆದರು.

**ಅಲ್ಲು ಇಲ್ಲು ಎಲ್ಲೆಲ್ಲು ಅಹಹ ನಾ**
**ಕಂಡೆ ಜೀವಸಖಿಯ;**
**ಚಂದ್ರಬಿಂಬದೆದೆ ತುಂಬಿ ಬಂದ ಆ**
**ನನ್ನ ಚಂದ್ರಮುಖಿಯ.**

ನಗು ನನ್ನ ನಲ್ಲೆ:

**ನಗು ನನ್ನ ನಲ್ಲೆ**
**ನೀನೇಕೆ ನಗಲೊಲ್ಲೆ?**
**ನಿನ್ನೆದೆಯ ನಾ ಬಲ್ಲೆ;**
**ನಾಚಿಕೆಯ ಹಿಮದಲ್ಲೆ**
**ಹೂತುಹೋಗಿದೆ ನಗೆಯ ಮೊಲ್ಲೆ**
**ಎದೆಯ ಕಾವೇರಲಿ, ಮಂಜೆಲ್ಲ ಕರಗಲಿ;**
**ನಗು ನನ್ನ ನಲ್ಲೆ.**

ಇಂಥ ಕವಿತೆಗಳಲ್ಲಿ ನವೋದಯದ ಸಂಪ್ರದಾಯದಲ್ಲಿ ಕಾಣಿಸುವ ಅತಿಭಾವುಕತೆ, ಸೌಂದರ್ಯೋಪಾಸನೆ, ಪ್ರೇಮದ ಆರಾಧನೆ ಕಾಣಿಸುತ್ತೆ. ಪ್ರಸ್ತುತ ಕವಿತೆಯಲ್ಲಿ ತನ್ನ ಪ್ರೇಮಿಯ ನಗುವಿನ ವೈಶಾಲ್ಯತೆ, ಹರಹು ಹೆಚ್ಚಾಗಲೆಂಬ ಆಶಯವಿದೆ. 'ಮುಗುದೆ ಇವಳು' ಕವಿತೆಯಲ್ಲಿ ಇದೇ ಒಲವಿನ ತೀವ್ರ ಭಾವನೆಯನ್ನು ವ್ಯಕ್ತಪಡಿಸುತ್ತಾರೆ. ತನ್ನ ಪ್ರೇಯಸಿ ಮುಗ್ಧೆ, ಏನೊಂದನೂ ಅರಿಯದವಳು. ಅವಳ ಜೊತೆಗಿನ ಎಲ್ಲ ಸರಸ ಮಾತುಕತೆಯೂ ಕನಸಿನಲ್ಲಿ ಮಾತ್ರ ಸಾಧ್ಯ.

**ತುಟಿಗೆ ತುಟಿಯ ಸೋಂಕಿಸದೆಯೆ**
**ಎದೆಗೆ ಎದೆಯ ತಾಗಿಸದೆಯೆ,**
**ಕಣ್ಣಿಕಣ್ಣ ಕೂಡಿಸದೆಯೆ,**
**ಎದೆಯನೆಲ್ಲ ಗೆದ್ದಳು,**
**ಮನವನೆಲ್ಲ ಕದ್ದಳು,**
**ಕನಸಿನಲ್ಲು ಸಿದ್ದಳು.**

ತನ್ನ ಕನಸಿನಲ್ಲಿಯೂ ಹಾಜರಾಗುವ, ತಾನು ಪ್ರೀತಿಸಿದ್ದ ಹೆಣ್ಣು ದೇಹ ಸಂಪರ್ಕವಿಲ್ಲದೆಯೆ ತನ್ನನ್ನು ಗೆದ್ದ ರೀತಿಯನ್ನು ಈ ಕವಿತೆಯ ನಾಯಕ ಚಿತ್ರಿಸಿದ್ದಾನೆ. ಅವಾಸ್ತವವನ್ನೇ ವಾಸ್ತವವೆಂದುಕೊಳ್ಳುವ ಕನಸುಗಾರಿಕೆಗೆ ಮತ್ತು ನವೋದಯದ ಸತ್ವ ಮುಗಿದದ್ದಕ್ಕೆ ಇದು ಇನ್ನೊಂದು ಉದಾಹರಣೆ.

'ನನ್ನವಳೀ ಹೆಣ್ಣು' ಇಂಥದ್ದೆ ಮತ್ತೊಂದು ಉದಾಹರಣೆ. 'ನನ್ನವಳು' ಎಂದುಕೊಂಡ ಹೆಣ್ಣನ್ನು ಕಂಡದ್ದೇ ನೂರು ಯಾಗದ ಪುಣ್ಯವೆಂದೂ ಅದು ಅಮರಾವತಿ ಭೋಗಕ್ಕೆ ಸಮನೆಂದೂ, ಇನ್ನು ಯಾವತ್ತೂ ವಿಯೋಗವೆಂಬುದು ಇರುವುದಿಲ್ಲ. ಹಾಗಾಗಿ ಇದನ್ನೆಲ್ಲ ಪಡೆದ ತಾನು ಯೋಗಿ ಎಂದು ಕನವರಿಸುತ್ತಾನೆ. ಸಾಮಾನ್ಯವಾಗಿ ಯೋಗಿಗಳು ಹೆಣ್ಣನ್ನು ತೊರೆಯುತ್ತಾರೆ. ಆದರೆ ಇಲ್ಲಿಯ ನಾಯಕನಿಗೆ ಹೆಣ್ಣಿನ ಬಗೆಗಿನ ವ್ಯಾಮೋಹ ಹೆಚ್ಚಾಗಿದೆ.

ಒಂದು ವೇಳೆ ಇಂಥ ಹೆಣ್ಣಿನಿಂದ ತನಗೆ ಹತಾಶೆಯಾದರೆ, ಆಘಾತವಾದರೆ

ನಿರೂಪಕ ತಡೆದುಕೊಳ್ಳಲಾರ.

ಅಡಿಗರ ಆರಂಭದ ಕವಿತೆಗಳಲ್ಲಿ ಉತ್ಸಾಹ, ಸ್ನೇಹ, ಪ್ರೇಮ ಎಲ್ಲವೂ ಭಾವನಾತ್ಮಕವಾಗಿ ಕಂಡು ಬಂದು, ಅವು ಯಾವುವೂ ದಕ್ಕದೆ ಹೋದ ಅನಂತರದಲ್ಲಿ ಅವುಗಳ ಜಾಗದಲ್ಲಿ ನಿರಾಸೆ, ಕ್ರೋಧ, ಅನಾಸಕ್ತಿ ಕಂಡು ಬರುತ್ತದೆ.

ಹೆಣ್ಣು ಎನ್ನುವ ಕವಿತೆಯಲ್ಲಿ: ''ಹೆಣ್ಣ, ಈ ಬರಿ ಹೆಣ್ಣ ಎದೆಗಡಲ ಪೇರಾಳ, ಕಂಡ ಕಲಿಗಳು ಮಾತ್ರ ಕಂಡರಿಲ್ಲ'' ಎನ್ನುತ್ತಾರೆ.

ಅಂದರೆ ಹಿರಿದಾದ ಕಡಲ ತಳವನ್ನೇ ಕಂಡು ಬಂದ ಕಲಿಗಳುಂಟು, ಪಾತಾಳದಾಳಕ್ಕೂ ಇಳಿದ ಭಟರುಂಟು. ಆದರೆ 'ಬರಿ ಹೆಣ್ಣ' ಎದೆಗಡಲಿನ ವಿಶಾಲವಾದ ಆಳವನ್ನು ಕಂಡ ವೀರರಾರೂ ಇಲ್ಲ ಎಂದಿರುವುದು ದ್ರಾಕ್ಷಿ ಎಟುಕದ ನರಿಯ ಮಾತಿನ ಹಾಗಿದೆ. ಈ ಕವಿತೆಯ ನಿವೇದಕನಿಗೆ ಹೆಣ್ಣಿನ ಮನಸ್ಸನ್ನು ಅರಿಯಲು ಸಾಧ್ಯವಾಗಿಲ್ಲ.

ಬರಿ ಹೆಣ್ಣು-ಪದ ಕ್ಲೀಷೆಯಾಗಿದೆ. ಅಲ್ಲದೆ ಅವಳು ಹೆಗ್ಗೋರಿ, ಸಾವಿನಾದಿಯಾಗಿರುವುದು ಕವಿಯ ಕಸಿವಿಸಿ ಮನಸ್ಸಿಗೆ ಸಾಕ್ಷಿಯಾಗಿದೆ.

'ಎಂಥ ಕಣ್ಣು' ಎನ್ನುವ ಕವಿತೆಯೂ ಇದೇ ಧಾಟಿಯಲ್ಲಿದೆ (ನವೋದಯ ಶೈಲಿ). ತನ್ನ ನಲ್ಲೆಯ ಕಣ್ಣಿನ ಹೊಳಪು, ಅದರ ಕಳೆ, ಅದರ ಆಕರ್ಷಣೆಗೆ ಕವಿ ಮನಸ್ಸು ಸೋತಿದೆ. ಆ ಕಣ್ಣುಗಳನ್ನು ಕಮಲಗರ್ಭದಲ್ಲಿರುವ ದುಂಬಿ ಮರಿಗಳಿಗೂ ಅಮೃತದ ಹನಿಗಳಿಗೂ ಮತ್ತು ಹೊನ್ನಗಣಿಗೂ ಹೋಲಿಸಿರುವುದು ಕಣ್ಣಿನ ಅದ್ಭುತ ಚೆಲುವಿಗೆ ಸಾಕ್ಷಿಯಾಗಿದೆ. ನವೋದಯದ ಭಾವನೆಗಳಿಂದ ಪ್ರೀತಿ, ವಾತ್ಸಲ್ಯ, ಭಾವೋದ್ವೇಗದ ಸಂಕೇತಗಳು ಇಂಥ ಅನೇಕ ಕವಿತೆಗಳಲ್ಲಿ ವಸ್ತುವಾಗಿವೆ. ಹೆಣ್ಣಿನ ಹಲವಾರು ಮುಖಗಳನ್ನು ಚಿತ್ರಿಸಲಿಕ್ಕೆ ಪ್ರಯತ್ನಿಸಿದ ಈ ಕವಿತೆಗಳ ನಾಯಕ ಹೆಣ್ಣನ್ನು ದೇವಿ ಎಂದೂ, ಪ್ರಿಯೆ ಎಂದೂ, ತಂಗಿಯೆಂದೂ ಕರೆದವನು ಕೊನೆಕೊನೆಗೆ ಅವಳ ಹೃದಯವನ್ನು ವಿಮರ್ಶಿಸಲಿಕ್ಕೆ ತೊಡಗುತ್ತಾನೆ.

ಈವರೆಗಿನ ಹೆಣ್ಣಿನ ಬಗೆಗಿನ ಎಲ್ಲ ಭಾವವೂ ಬರೀ ಮಾತಾಗಿತ್ತಷ್ಟೆ. ಆದರೆ 'ಚಿಂತಾಮಣಿಯಲ್ಲಿ ಕಂಡ ಮುಖ' ಕವಿತೆಯಲ್ಲಿ ಅನುಭವವಾಗಿ ಆವಿಷ್ಕಾರವಾಗಿದೆ.

ಈ ಕವಿತೆಯ ನಿವೇದಕ ಚಿಂತಾಮಣಿಯ ಸಭಾಂಗಣದಲ್ಲಿ ಭಾಷಣ ಮಗ್ನನಾಗಿದ್ದಾನೆ. ಶೇಕಡಾ ತೊಂಭತ್ತು ಪಾಲು ಭಾಷಣದಲ್ಲಿ ಮಗ್ನನಾಗಿದ್ದಾಗಲೂ ಆತನ ಕಣ್ಣು ಪ್ರತಿಮುಖವನ್ನು ಶೋಧಿಸುತ್ತಿದೆ. ನಿಲ್ದಾಣವಿರುವ ನಡುಗಡ್ಡೆಯ ಶೋಧಕ್ಕಾಗಿ ಮುಖದಿಂದ ಮುಖಕ್ಕೆ ಈ ರೀತಿಯ ಹುಡುಕಾಟ ನಡೆದಿದೆ. ತಾನು ಬಯಸುತ್ತಿದ್ದ ನಿಲ್ದಾಣ ಸಿಕ್ಕರೆ, ಒಂದು ನಿಮಿಷ ವಿಶ್ರಮಿಸಬಹುದೆನ್ನುವ ಆಸೆಯಿದೆ.

ಅಂತರಂಗದಲ್ಲುದಿಸುವ ಅನಂಗ ಭಂಗಿಗೆ ತಕ್ಕ ಭಂಗಿಯನ್ನು ಕೊಡುವ, ದೃಷ್ಟಿಗೆ ಪ್ರತಿದೃಷ್ಟಿಯನ್ನೂ, ಹೃದಯದ ಬಡಿತಕ್ಕೆ ತಕ್ಕ ಪ್ರತಿ ಬಡಿತವನ್ನೂ ಕೊಡುವ ಸಮಾನ ಮನಸ್ಸಿನ ಸಮಹೃದಯಕ್ಕಾಗಿ ಹುಡುಕಾಟ ನಡೆದಿದೆ. ಇಂಥ ಸಹಕಂಪನ ಮತ್ತು ರೋಮಾಂಚನವನ್ನು ಪ್ರತಿಫಲಿಸುವ ಮುಖವೊಂದನ್ನು ಕವಿ ಭಾಷಣಮಗ್ನನಾಗಿದ್ದಾಗ ಬಯಸುತ್ತಿರುವುದು ಇಲ್ಲಿ ವಿಶೇಷ. ಆಗೊಂದು ಆಶ್ಚರ್ಯ ಘಟಿಸುತ್ತೆ:

'ಹಠಾತ್ತಾಗಿ ಮೂಡಿತ್ತಲ್ಲಿ ಅಗೋ, ಅಗೋ ಸಭಾಮಧ್ಯದಲ್ಲಿ ಪರಮಾಪ್ತ ಮುಖ, ಮಾತಿನಾಚೆಯ ಸಹಸ್ಪಂದಿ; ಮಾತಿಲ್ಲದೆಯೆ ಇಂಗಿತವನರಿವ ಸಹಜ ಮುದ್ರೆ ಯಾವ ಮುಖ ಅದು? ಎಲ್ಲಿ ಯಾವಾಗ ಯಾವ ಭವದಲ್ಲಿ ಲೋಕದಲ್ಲಿ, ಸಂಭಾವ್ಯತೆಯ ಯಾವ ಆಕಸ್ಮಿಕದ ಆತ್ಮೀಯತೆಯ ಆಪ್ಯಾಯಮಾನ ಕ್ಷಣದಲ್ಲಿ ಕಂಡದ್ದು ಅದು?' ಅಂತ ಅನ್ನಿಸಿಬಿಡುತ್ತದೆ. ತಾನು ಹುಡುಕುತ್ತಿದ್ದ ಮುಖ ಹಠಾತ್ತನೆ ಸಭಾಮಧ್ಯದಲ್ಲಿ ಕಾಣಿಸಿಕೊಳ್ಳುತ್ತದೆ. ಆ ಮುಖ ಅವನಿಗೆ ಆತ್ಮೀಯವಾದದ್ದು. ಅವನ ಜೊತೆಯಲ್ಲಿ ಮಾತಿನಾಚೆಯ ಮಾತುಗಳನ್ನು ಆಡುವಂಥಾದ್ದು. ಮಾತಾಡದಿದ್ದರೂ ಮನಸ್ಸಿನಲ್ಲಿ ಇದ್ದದ್ದನ್ನು ಹಂಚಿಕೊಳ್ಳುವಂಥಾದ್ದು. ಆದರೆ ಅದು ಯಾವ ಜನ್ಮದಲ್ಲಿ ಕಂಡದ್ದು ಎನ್ನುವುದು ಹೊಳೆಯುವುದಿಲ್ಲ. ಕಾಣುವ ಸಾಧ್ಯತೆ ಇದ್ದ ಆ ಮುಖ ಈ ಒಂದು ಕ್ಷಣದಲ್ಲಿ ಕಾಣಿಸಿ ಸಾಕಾರವಾಗಿದೆ. ಇದರಿಂದ ಈ ಕವಿತೆಯ ನಾಯಕನಿಗೆ ಪರಮ ಸಂತೋಷವಾಗುತ್ತದೆ. ತನ್ನ ಅಂತಃಕರಣಕ್ಕೆ ಹತ್ತಿರವಾದ ಒಂದು ವ್ಯಕ್ತಿಯ ಜೊತೆಗಿದ್ದಂತೇ ಅನಿಸುತ್ತದೆ.

ಅಸಂಭಾವ್ಯವೊಂದು ಸಂಭವಿಸಿದ ಬೆರಗಿದೆ. ಅವಳು ಅಲೌಕಿಕ ಸಖಿ ಎನಿಸುತ್ತಾಳೆ. ಮುಖದಲ್ಲಿ ಯಾವ ನಾಟಕವೂ ಇಲ್ಲದೆ, ಹೃದಯದ ಅಂತರ್ಮೂಲದಿಂದ ಬಂದ ಅಮೂಲ್ಯವಾದ ನಗೆಯಾಕೆ. ಆದ್ದರಿಂದಲೆ;

**ಚಿಂತಾಮಣಿಯನ್ನು ಹಿಡಿದು ಬಯಸುತ್ತಿದ್ದ**
**ಅರಸುತ್ತಿದ್ದ ನನ್ನ ಆ**
**ಇನ್ನೊಂದು ಮುಖ; ಸ್ತ್ರೀ ಮುಖ.**
. . . . . . . . . .
**ನನ್ನದೇ ಆದ ಹೊಸ ಮುಖ**

ಈ ಹಂತದಲ್ಲಿ ನೀನು, ನಾನು ಎನ್ನುವ ಪ್ರತ್ಯೇಕತೆಯನ್ನು ಕಳೆದುಕೊಂಡು ದೇಹ-ಮನಸ್ಸುಗಳ ಸಂವಾದದಂತೆ ಒಂದಾಗುತ್ತದೆ. ಆದರೂ ನಿರೂಪಕನಿಗೆ, ಕವಿಗೆ ತಾನು ಕಂಡ ಮುಖದ ಬಗ್ಗೆ ಯಾವುದೇ ಮಾಹಿತಿ ಸಿಕ್ಕಿಲ್ಲ. ಇದು ವಿಷಾದ ಮತ್ತು ಸಂತೋಷ ಎರಡನ್ನೂ ಏಕಕಾಲದಲ್ಲಿ ಉಂಟು ಮಾಡಿದೆ. ನಿರೂಪಕನ ತನ್ನದೇ ಆದ ಆ ಮುಖ ಮಾನಸ ಸರೋವರದ ರಾಜಹಂಸವನ್ನು ನೆನಪಿಸುತ್ತಿತ್ತು.

ಈ ಆಪ್ಯಾಯಮಾನ ಅನುಭವ ನಮ್ಮೆಲ್ಲರದ್ದೂ ಆಗಬಹುದೆ? ನಿರೂಪಕನಂತೆ

ಪ್ರತಿ ಪ್ರೇಮಿಯೂ ಆಂತರ್ಯದ ಧ್ವನಿಯನ್ನು ಕೇಳಬಹುದೆ?

**'ಮತ್ತೆ ಯಾವಾಗ ಮರುಭೇಟಿ? ಕಣ್ಣು ಕಣ್ಣುಗಳ ಸಮ್ಮಿಲನ.**
**ಮೌನದ ನಿಗೂಢ ಗಂಭೀರ ಸಂವಾದದ ಚಟಾಕಿ?**
**ಆತ್ಮೀಯ ದೀವಿಗೆ ಮತ್ತೆ ಬರಬಲ್ಲೆನೆ, ಏಳು ಕಡಲುಗಳ ದಾಟಿ?**
**ಬಂದರೂ ಕೂಡ ದೊರೆವುದೆ ಹೇಳು?**
**ಈ ಇಂಥ ಸರಿಸಾಟಿ?**
**ನಮ್ಮವರು ಅಥವಾ ನಾವೇ ಅನಿಸುವಂಥವರು ಸಿಕ್ಕಾಗ ಕೇಳಿಕೊಳ್ಳಬಹುದು.'**

ಅಡಿಗರು ತಾವು ನವ್ಯತೆಯ ಉತ್ತುಂಗದಲ್ಲಿ ಬರೆದ 'ಚಿಂತಾಮಣಿಯಲ್ಲಿ ಕಂಡಮುಖ', 'ಭೂಮಿಗೀತೆ', 'ಬಾ ಇತ್ತ ಇತ್ತ' ಮೊದಲಾದ ಸಂಕಲನದ ಕವಿತೆಗಳು ಉತ್ಕೃಷ್ಟವಾಗಿವೆ.

ಸುಮಾರು 44 ವರ್ಷಗಳು ದಾಂಪತ್ಯಗೀತೆ ಹಾಡಿದ ಹೆಂಡತಿ 'ಮೌನದ ಸುವರ್ಣ ಪುತ್ಥಳಿ'ಯಾಗಿ ಕಾಣಿಸುತ್ತಾರೆ.

**ತಾಳಿಭಾಗ್ಯಕ್ಕಿಷ್ಟು ಬೆಲೆಯೆ? ಏತಕ್ಕಾಗಿ ಇಷ್ಟು ತೆತ್ತೇ?**
**ಈ ಕಠೋರ ವ್ರತ ಯಾವಾಗ ನಿಲ್ಲುತ್ತದೆ.**
**ಮನೆಯ ನಂದನ ಮಾಡಿದ ಸುರಸುರಭಿ?**

ಎಂದು ಪ್ರಶ್ನಿಸುವಲ್ಲಿ ಪತ್ನಿ, ಗೆಳತಿ, ಮಹಿಳೆ ಈ ಎಲ್ಲರನ್ನೂ ಪ್ರಶ್ನಿಸಿದಂತೆ ಭಾಸವಾಗುತ್ತೆ. ಒಟ್ಟಾರೆಯಾಗಿ ಹೆಣ್ಣನ್ನು ಒಂದು 'ಪ್ರೌಢಕಾವ್ಯ' ಎಂದು ಗುರುತಿಸುವಲ್ಲಿ ಅಡಿಗರು ಎಷ್ಟು ಮಾಗಿದ್ದರು (1988), ಹೆಣ್ಣಿನ ಬಗೆಗಿನ ಭಾವನೆ ಎಷ್ಟು ಎತ್ತರಕ್ಕೇರಿತ್ತು ಎಂದು ಬಿಂಬಿಸುವುದೇ ಆಗಿದೆ.

ತೀರ್ಥರೂಪರಿಗೆ ಎನ್ನುವ ಕವಿತೆಯಲ್ಲಿಯೂ ತನ್ನ ತಾಯಿಯನ್ನು ಗೌರವದಿಂದ ಸ್ಮರಿಸುತ್ತಾರೆ. ಆಕೆ ಎಲ್ಲ ಮಹಿಳೆಯರ ಪ್ರತಿನಿಧಿಯಾಗುತ್ತಾರೆ. ಹಾಗೆಯೆ 'ಭೂಮಿಗೀತ' ಕವಿತೆಯನ್ನೂ ನಾವಿಲ್ಲಿ ನೆನಪು ಮಾಡಿಕೊಳ್ಳಬೇಕು. ಈ ಕವಿತೆಯಲ್ಲಿ

» ಮನುಷ್ಯನಿಗೂ ಭೂಮಿಗೂ ಇರುವ ಸಂಬಂಧ ಮುಖ್ಯವಾದ ವಸ್ತುವಾಗಿದೆ.

» ನೆಲತಾಯಿ-ಮಲತಾಯಿಯಾಗುತ್ತಾಳೆ.

» ಕ್ರಮೇಣ ಅವಳ ಸಂಬಂಧ ಈಡಿಪಸ್ಸನಿಗೂ ಅವನ ತಾಯಿಗೂ ಇರುವ ಸಂಬಂಧವಾಗಿ ಕಾಣಿಸುತ್ತದೆ.

» ಇಡೀ ಸೃಷ್ಟಿಯಲ್ಲಿ ಮಾನವನ ಸ್ಥಾನ ಅತ್ಯಂತ ತಿರಸ್ಕೃತವಾದದ್ದು ಎನಿಸುತ್ತೆ.

ತನ್ನ ಅಂತಿಮಕಾಲದಲ್ಲಿ, ಆಕೆ ಹೊರಬರಳು. ಏಕೆಂದರೆ ಅವಳಿಗೆ ಇನ್ನೊಂದು ಹೆರಿಗೆಯಾಗಿದೆ. ಈ ಭೂಮಿಯ ಮೇಲೆ, ಸಾವು, ಹುಟ್ಟು ನಿರಂತರ ಪುನರಪಿ

ಜನನಂ ಪುನರಪಿ ಮರಣಂ ಆಗಿದೆ.

ಒಟ್ಟಾರೆಯಾಗಿ ಭೂಮಿ, ಮನುಷ್ಯನಿಗೆ ಇಂದ್ರಿಯ ಸುಖಗಳನ್ನು ಕಲಿಸಿಕೊಡುತ್ತದೆ. ಸರಬರಾಯಿ ಮಾಡುತ್ತದೆ. ಪ್ರಾಣಿಗೂ ಮನುಷ್ಯನಿಗೂ ಏನೂ ಅಂತರವಿಲ್ಲದ ಪರಿಪಾಠ ಭೋಗ. ಆದರೆ ಕವಿ ಮನುಷ್ಯ ಪ್ರಜ್ಞೆಯುಳ್ಳ ಜೀವಿಯಾದ್ದರಿಂದ ಅವನಿಗೆ, ಬರಿ ಪ್ರಾಣಿಯ ಮಟ್ಟದಲ್ಲಿ ಪಾಪದ ಸೋಂಕಿಲ್ಲದೆ ನೆಲವನ್ನು ನಮ್ಮ ಅರಿವಿಗೆ ಬರುತ್ತೆ. ಭೂಮಿಗೀತದ ಮುಖ್ಯ ಉದ್ದೇಶ ಜೀವನದ ಬೇರು ಹುಡುಕುವುದು.

ಅಡಿಗರ ಪ್ರಾರಂಭದ ಕವಿತೆಗಳಲ್ಲಿ ಹೆಣ್ಣು ಬರೀ ಮೋಹಕ. ಹೃದಯ ವಿದ್ರಾವಕವಾಗಿ ಕಾಣಿಸುತ್ತಾಳೆ. ನವ್ಯಕಾವ್ಯ ಶಿಖರಾಗ್ರಕ್ಕೆ ಏರಿದಂತೆಲ್ಲ ತನ್ನ ಮನೋಗತದಲ್ಲಿ ಮಹಿಳೆಯ ಸ್ಥಾನವೂ ಉನ್ನತಿಗೆ ಏರಿರುವುದನ್ನು ಕಾಣಬಹುದು.

"ಬಾ ಇತ್ತ ಇತ್ತ" ಕವಿತೆಯ ನಿವೇದಕ ಮೌನದ ಸುವರ್ಣ ಪುತ್ಥಳಿಯ ನಿವೇದಕನೇ ಆಗಿದ್ದಾನೆ. ಅವನು ತಮ್ಮಿಬ್ಬರ ನಡುವಿನ ಮೌನಕ್ಕೆ ತಾನೇ ಕಾರಣ ಎಂದು ಒಪ್ಪಿಕೊಳ್ಳುತ್ತಾನೆ.

**"ನೀನು ನನ್ನವಳಾಗಿ ಬಂದಾಗ ಮುಗ್ಧ ಕಿಶೋರಿ**
**ನಾನೊ ಪ್ರೌಢವಿದಗ್ಧ, ಅಧ್ಯಾಪಕ ವರಾಕ.**
**ಆಗ ನಿನಗೆ ನಿನ್ನಂತರಂಗದ ಎಲ್ಲ ತುಡಿತಕ್ಕು**
**ರಕ್ಷಾಕವಚ ಲಜ್ಜೆ, ಸಂಕೋಚ, ಹಿಂಜರಿಕೆ;**
**ಆಗ ಹತ್ತಿರ ಕರೆದು ಬರಸೆಳೆದು ಮನವೊಲಿಸಿ,**
**ಮೂಕಪಿಕ ಕುಕಿಲುವೊಲು ಮಾಡಬೇಕಿತ್ತು, ಹಾಗೆ**
**ಮಾಡದೇ ಇದ್ದದ್ದು ಮೊದಲ ಭಾರಿ ತಪ್ಪು".**

ಇಂಥ ಕವಿತೆಗಳಲ್ಲಿರುವ ಹೆಂಡತಿಯ/ಮಹಿಳೆಯ ಮೌನ ಧ್ವನಿಪೂರ್ಣವಾಗಿದೆ. ಇವು ಒಂದು ರೀತಿಯ ಕ್ಲೇಶದಾಯಕ ದಾಂಪತ್ಯದ ಚಿತ್ರಣವಾಗಿದೆ. ಈ ಅಸಫಲತೆಗೆ ಕಾರಣಗಳನ್ನು ನಿವೇದಕ ಯೋಚಿಸಿದ್ದಾನೆ. ಅವಳು ತಾಳಿಭಾಗ್ಯಕ್ಕೆ ಇಷ್ಟು ದೊಡ್ಡ ಬೆಲೆಯನ್ನು ತೆರಬೇಕಾಯಿತೆ ಎಂದು ಮದುವೆಯ ವ್ಯವಸ್ಥೆಯನ್ನು ಪ್ರಶ್ನಿಸಿದ್ದು ಅವರ ಸಾಕ್ಷಿಪ್ರಜ್ಞೆಗೆ ದ್ಯೋತಕವಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಲಕ್ಷ್ಮೀನಾರಾಯಣ ಭಟ್ಟ ಎನ್. ಎಸ್. (2016). ಅನನ್ಯ. ಕ್ಷಮಾ ಪ್ರಕಾಶನ. ಬೆಂಗಳೂರು.
2. ಸುಮತೀಂದ್ರ ನಾಡಿಗ. (1997). ಅಡಿಗರು ಮತ್ತು ನವ್ಯಕಾವ್ಯ. ಎಸ್.ಬಿ.ಎಸ್. ಪಬ್ಲಿಷರ್ಸ್. ಬೆಂಗಳೂರು.
3. ದೇಶಪಾಂಡೆ ಸುಬ್ಬರಾಯ (ಸಂ). (1977). ಅನ್ವೇಷಣದ ಅಡಿಗರು. ಅನ್ವೇಷಣ ಪ್ರಕಾಶನ. ಹುಬ್ಬಳ್ಳಿ
4. ಅಣ್ಣಮ್ಮ. (2016). ಅಡಿಗರ ಕಾವ್ಯದಲ್ಲಿ ವಾಸ್ತವತೆ. ನಿವೇದಿತಾ ಪ್ರಕಾಶನ. ಬೆಂಗಳೂರು.